ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 424
2. ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 16.12.2021
4. ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಾಜಕಗಳನ್ನು ಖಾಸಗಿ ಬಿಲ್ಡರ್ ನಿರ್ಮಿಸಿದ ವಸತಿ ಗೃಹಗಳು ಮಾರಾಟಕ್ಕೆ ಅನುಕೂಲವಾಗುವ 15.07.2019 ರಂದು ಪೊಲೀಸ್ ಇಲಾಖೆಯು ಯಾವುದೇ ಅನುಮತಿ ಪಡೆಯದೆ ಅಕ್ರಮವಾಗಿ ತೆರವುಗೊಳಿಸಲಾಗಿದೆ ಎಂಬುದರ ಕುರಿತು ಸರ್ಕಾರದ ನಿಲುವೇನು ?	➢ ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲುರಸ್ತೆಯ ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಜಕಗಳನ್ನು ಪೊಲೀಸ್ ಇಲಾಖೆಯಿಂದ ತೆರವುಗೊಳಿಸಿರುವುದಿಲ್ಲ. ➢ ರಾಷ್ಟ್ರೀಯ ಹೆದ್ದಾರಿ–7 ನಡುವಿನ ಪಿಲ್ಲರ್ ಸಂಖ್ಯೆ 20 & 21ರ ನಡುವಿನ ರಸ್ತೆ ವಿಭಜಕಗಳನ್ನು ದಿನಾಂಕ:03/04/2019 ರಂದು ರಸ್ತೆ ಸುರಕ್ಷತಾ ಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ತೆರವುಗೊಳಿಸಲಾಗಿರುತ್ತದೆ. ➢ ರಸ್ತೆ ಸುರಕ್ಷತಾ ಸಮಿತಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ರಚಿಸಲಾಗುತ್ತದೆ. ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಜಂಕ್ಷನ್‌ವರೆಗಿನ ರಸ್ತೆಯ ಪರಿಧಿಗೆ ರಸ್ತೆ ಸುರಕ್ಷತಾ ಸಮಿತಿಯ ಸದಸ್ಯರುಗಳಾನ್ನಾಗಿ ಸಂಚಾರ ಪೊಲೀಸ್, ಎನ್.ಹೆಚ್.ಎ.ಐ. ಹಾಗೂ ಬಿ.ಇ.ಟಿ.ಪಿ.ಎಲ್. ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ. ➢ ದಿನಾಂಕ:03.04.2019 ರಂದು ಬೊಮ್ಮನಹಳ್ಳಿ ಜಂಕ್ಷನ್‌ನಲ್ಲಿ ಸತತವಾಗಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆಗೆ ಪರಿಹಾರ ಕೈಗೊಳ್ಳುವ ಸಲುವಾಗಿ ರಸ್ತೆ ಸುರಕ್ಷತಾ ಸಮಿತಿಯ ಅಧಿಕಾರಿಗಳು ಜಂಟಿ ಸಮೀಕ್ಷೆಯನ್ನು ಕೈಗೊಂಡು, ಸಮೀಕ್ಷೆಯಲ್ಲಿ ಕಂಡು ಬಂದ ಅಂಶಗಳ ಬಗ್ಗೆ ಚರ್ಚಿಸುವ ಸಲುವಾಗಿ ಸಭೆಯನ್ನು ನಡೆಸಿರುತ್ತಾರೆ. ಈ ರಸ್ತೆ ಸುರಕ್ಷತಾ ಸಮಿತಿಯ ಅಧಿಕಾರಿಗಳ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಪಿಲ್ಲರ್ ನಂ 4 ಮತ್ತು 5ರ ನಡುವೆ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಪಿಲ್ಲರ್ ನಂ 20 ಹಾಗೂ 21ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಲು ನಿರ್ಧರಿಸಿ, ಆ ರಸ್ತೆಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸೂಚಿಸಲಾಗಿರುತ್ತದೆ. ▪ ಹೈರೈಸ್ಡ್ ಪೆಡೆಸ್ಟ್ರೀಯನ್ ಕ್ರಾಸಿಂಗ್ ನಿರ್ಮಾಣ ಮಾಡುವುದು ▪ ಎಲ್.ಇ.ಡಿ. ಬ್ಲಿಂಕರ್ಸ್‌ಗಳನ್ನು ಅಳವಡಿಸುವುದು

		▪ ಅವಶ್ಯಕತೆ ಇರುವ ಕಡೆಗಳಲ್ಲಿ ಸ್ಪೀಡ್ ಟೇಬಲ್‌ಗಳನ್ನು ನಿರ್ಮಾಣ ಮಾಡುವುದು.
ಆ)	ಖಾಸಗಿ ಬಿಲ್ಡರ್‌ನಿಂದ ಲಂಚದ ರೂಪದಲ್ಲಿ ಫ್ಲಾಟ್‌ಗಳನ್ನು ಪಡೆದ ಪೊಲೀಸ್ ಇಲಾಖೆಯಅಧಿಕಾರಿಗಳು 15.07.2019 ರಂದು ರಸ್ತೆ ವಿಭಾಜಕಗಳನ್ನು ತೆರವುಗೊಳಿಸಿದ ಬಳಿಕ ರಸ್ತೆ ಉಬ್ಬರವನ್ನು ನಿರ್ಮಿಸಲು ನಿರ್ದೇಶಕರು, ಬಿ.ಇ.ಟಿ.ಪಿ.ಎಲ್ ಗೆ ಪತ್ರ ಬರೆಯಲು ಕಾರಣವೇನು ; ಅನಧಿಕೃತವಾಗಿ ರಸ್ತೆ ವಿಭಾಜಕಗಳನ್ನು ತೆರವುಗೊಳಿಸಿದ ಮಾದರಿಯಲ್ಲಿ ಪೊಲೀಸ್ ಇಲಾಖೆಯೇ ರಸ್ತೆ ಉಬ್ಬರವನ್ನು ನಿರ್ಮಿಸುವ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ ;	ಖಾಸಗಿ ಬಿಲ್ಡರ್‌ನಿಂದ ಲಂಚ ರೂಪದಲ್ಲಿ ಫ್ಲಾಟ್‌ಗಳನ್ನು ಪಡೆದ ಪೊಲೀಸ್ ಅಧಿಕಾರಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ➢ ದಿನಾಂಕ:03/04/2019 ರಂದು ರಸ್ತೆ ಸುರಕ್ಷತಾ ಸಮಿತಿಯು ಕೈಗೊಂಡ ಜಂಟಿ ಸಮೀಕ್ಷೆ ಹಾಗೂ ರಸ್ತೆ ಸುರಕ್ಷತಾ ಸಮಿತಿಯ ಅಧಿಕಾರಿಗಳ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಪಿಲ್ಲರ್ ನಂ 4 ಮತ್ತು 5ರ ನಡುವೆ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಪಿಲ್ಲರ್ ನಂ 20 ಹಾಗೂ 21ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಲು ನಿರ್ಧರಿಸಲಾಗಿರುತ್ತದೆ. ➢ ಈ ಸಭೆಯಲ್ಲಿ ರಸ್ತೆ ವಿಭಜಕಗಳನ್ನು ತೆರವುಗೊಳಿಸುವುದರ ಜೊತೆಗೆ ಹೈರೈಸ್ಡ್ ಪೆಡೆಸ್ಟ್ರಿಯನ್ ಕ್ರಾಸಿಂಗ್ ನಿರ್ಮಾಣ ಮಾಡಿ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದ್ದು, ಹೈರೈಸ್ಡ್ ಪೆಡೆಸ್ಟ್ರೀಯನ್ ಕ್ರಾಸಿಂಗ್ ನಿರ್ಮಾಣ ಮಾಡುವ ನಿರ್ಣಯವು ರಸ್ತೆ ಸುರಕ್ಷತಾ ಸಮಿತಿಯಲ್ಲೇ ಕೈಗೊಂಡ ನಿರ್ಣಯವಾಗಿದ್ದರಿಂದ, ಸಮಿತಿಯ ನಿರ್ಣಯದಂತೆ ಹೈರೈಸ್ಡ್ ಪೆಡೆಸ್ಟ್ರಿಯನ್ ಕ್ರಾಸಿಂಗ್(ವೈಜ್ಞಾನಿಕ ರಸ್ತೆ ಉಬ್ಬರ) ನಿರ್ಮಾಣ ಮಾಡುವ ಕುರಿತು ನಿರ್ದೇಶಕರು, ಬಿ.ಇ.ಟಿ.ಪಿ.ಎಲ್.ಗೆ ಪೊಲೀಸ್ ಇಲಾಖೆಯಿಂದ ಪತ್ರ ಬರೆಯಲಾಗಿರುತ್ತದೆ. ➢ ರಾಷ್ಟ್ರೀಯ ಹೆದ್ದಾರಿ-7 ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಹೈರೈಸ್ಡ್ ಪೆಡೆಸ್ಟ್ರೀಯನ್ ಕ್ರಾಸಿಂಗ್(ವೈಜ್ಞಾನಿಕ ರಸ್ತೆ ಉಬ್ಬರ)ವನ್ನು ನಿರ್ಮಾಣ ಮಾಡುವ ಜವಾಬ್ದಾರಿಯೂ ಕೂಡಾ ಹೆದ್ದಾರಿ ಪ್ರಾಧಿಕಾರದವರದಾಗಿರುತ್ತದೆ. ➢ ಪೊಲೀಸ್ ಇಲಾಖೆಯು ರಸ್ತೆ ಉಬ್ಬರವನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊಂದಿರುವುದಿಲ್ಲ.
ಇ)	ಪೊಲೀಸ್ ಇಲಾಖೆಯು ನಿರ್ದೇಶಕರು, ಬಿ.ಇ.ಟಿ.ಪಿ.ಎಲ್ ಎಲೆಕ್ಟ್ರಾನಿಕ್ ಸಿಟಿ ಇವರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಪಿಲ್ಲರ್ ಸಂಖ್ಯೆ 20 ಮತ್ತು 21ರ ನಡುವಿನ ರಸ್ತೆ ವಿಭಾಜಕಗಳನ್ನು ತೆರವುಗೊಳಿಸಿ ರುವುದರಿಂದ "ಯು" ತಿರುವು ಪಡೆಯುವ ವಾಹನಗಳಿಂದಾಗಿ ಅಪಘಾತಗಳು ನಡೆಯುವ ಸಂಭವ ಹೆಚ್ಚಾಗಿರುವುದಾಗಿ ಲಿಖಿತವಾಗಿ ಒಪ್ಪಿಕೊಂಡ ಬಳಿಕವು ಅನಧಿಕೃವಾಗಿ ತೆರವುಗೊಳಿಸಿದ ಸೆಂಟರ್ ಮೀಡಿಯ ನ್‌ಅನ್ನು ಪೊಲೀಸ್ ಇಲಾಖೆ	➢ ದಿನಾಂಕ:03.04.2019 ರಂದು ರಸ್ತೆ ಸುರಕ್ಷತಾ ಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಪಿಲ್ಲರ್ ನಂ 4 ಮತ್ತು 5ರ ನಡುವೆ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಪಿಲ್ಲರ್ ನಂ 20 ಹಾಗೂ 21ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಲಾಗಿರುತ್ತದೆ. ➢ "ಯು" ತಿರುವನ್ನು ಸಾರ್ವಜನಿಕ ಹಿತಾಸಕ್ತಿ ಹಿನ್ನೆಲೆಯಲ್ಲಿ ನೀಡಿದ್ದು, ರಸ್ತೆ ವಿಭಜಕಗಳನ್ನು ತೆರವುಗೊಳಿಸುವ ನಿರ್ಣಯವು ರಸ್ತೆ ಸುರಕ್ಷತಾ ಸಮಿತಿಯ ನಿರ್ಣಯವಾಗಿರುವುದರಿಂದ ಪೊಲೀಸ್ ಇಲಾಖೆಯು ಸ್ವತಂತ್ರವಾಗಿ ತೆರವುಗೊಳಿಸಿದ ರಸ್ತೆ ವಿಭಜಕಗಳನ್ನು ಪುನರ್ ನಿರ್ಮಿಸುವ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ. ➢ ರಸ್ತೆ ವಿಭಜಕಗಳನ್ನು ಅಕ್ರಮವಾಗಿ ತೆರವುಗೊಳಿಸಲು ಖಾಸಗಿ ಬಿಲ್ಡರ್‌ಗಳಿಂದ ಲಂಚ ಪಡೆದಿರುವ ಪೊಲೀಸ್ ಅಧಿಕಾರಿಗಳ ಬಗ್ಗೆ ಮಾಹಿತಿ ಇರುವುದಿಲ್ಲ.

	15.07.2019 ಕ್ಕಿಂತ ಮೊದಲು ಇದ್ದಂತೆ ಪುನರ್ ನಿರ್ಮಿಸದಿರಲು ಕಾರಣವೇನು ; ಯಾವ ಯಾವ ಪೊಲೀಸ್ ಅಧಿಕಾರಿಗಳು ಈ ರಸ್ತೆ ವಿಭಾಜಕಗಳನ್ನು ಅಕ್ರಮವಾಗಿ ಅನಧಿಕೃತವಾಗಿ ತೆರವುಗೊಳಸಲು ಖಾಸಗಿ ಬಿಲ್ಡರ್‌ರವರಿಂದ ಲಂಚ ಪಡೆದಿರುತ್ತಾರೆ ; ಈ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;	
ಈ	ಯಾವ ಖಾಸಗಿ ವ್ಯಕ್ತಿಗಳಿಗೆ ಪೊಲೀಸ್ ಇಲಾಖೆಯು ಕಾನೂನಿನ ವಿರುದ್ಧ ಲಾಭ ಮಾಡಿಕೊಡಲು ಪ್ರಯತ್ನಿಸಿದೆ; ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? (15.07.2019) ರಂದು ಈ ಅನಧಿಕೃತ ಕಾನೂನು ಬಾಹಿರ ಕೃತ್ಯದಲ್ಲಿ ಭಾಗಿಯಾದ ಪೊಲೀಸ್ ನಿರೀಕ್ಷಕರು ಎ.ಸಿ.ಪಿ ಮತ್ತು ಡಿ.ಸಿ.ಪಿ ಯವರ ಹೆಸರಿನೊಂದಿಗೆ ಮಾಹಿತಿ ನೀಡುವುದು)	ರಸ್ತೆ ವಿಭಜಕಗಳನ್ನು ತೆರವುಗೊಳಿಸುವ ಕಾರ್ಯವು ಅಧಿಕೃತವಾಗಿ ರಸ್ತೆ ಸುರಕ್ಷತಾ ಸಮಿತಿಯ ಸಭೆಯ ನಿರ್ಣಯದಂತೆ ಸುಗಮ ಸಂಚಾರಕ್ಕೆ ಕೈಗೊಂಡಿರುವ ಕಾರ್ಯವಾಗಿದ್ದು, ಯಾವ ಖಾಸಗಿ ವ್ಯಕ್ತಿಗಳಿಗೂ ಪೊಲೀಸ್ ಇಲಾಖೆಯು ಕಾನೂನು ವಿರುದ್ಧ ಲಾಭ ಮಾಡಿಕೊಳ್ಳಲು ಪ್ರಯತ್ನಿಸಿರುವುದು ಕಂಡುಬಂದಿರುವುದಿಲ್ಲ.

ಹೆಚ್‌ಡಿ 456 ಎಸ್‌ಎಸ್‌ಟಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು